ದಿನಾಂಕಃ **06.02.2026** ರಂದು ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು**.**

ಪಾಟೀ ಸವಾಲುಃ ಶ್ರೀ ಪಿ ಆರ್ ಸಿ ವಕೀಲರಿಂದಃ-

ಬಾಣೂರು ಗ್ರಾಮದ ಸರ್ವೆ ನಂ 135ಃ1 ರಲ್ಲಿ 1 ಎಕರೆ 34 ಗುಂಟೆ ಮತ್ತು 123 ರಲ್ಲಿ 16 ಗುಂಟೆ ಜಮೀನು ನನಗೆ ಸೇರಿದ ಜಮೀನು ಎಂದರೆ ಸರಿ. ನಾವು 4 ಜನ ಅಣ್ಣ ತಮ್ಮಂದಿರು. ಅವರುಗಳೆಂದರೆ ಕಂಬಣ್ಣ, ಓಂಕಾರಪ್ಪ ಮತ್ತು ಮಲ್ಲುಂಡಪ್ಪ ಮತ್ತು ನಾನು ಎಂದರೆ ಸರಿ. ಅವರ ಪೈಕಿ ನನ್ನನ್ನು ಹೊರತುಪಡಿಸಿ ಉಳಿದವರು ಮರಣಹೊಂದಿರುತ್ತಾರೆ ಎಂದರೆ ಸರಿ. ಅವರ ಹೆಂಡತಿ ಮಕ್ಕಳು ಈಗಲೂ ಜೀವಂತವಾಗಿರುತ್ತಾರೆ ಎಂದರೆ ಸಾಕ್ಷಿ ಓಂಕಾರಪ್ಪನ ಹೆಂಡತಿ ರುದ್ರಪ್ಪ ಮರಣ ಹೊಂದಿರುತ್ತಾರೆ ಎಂದು ನುಡಿಯುತ್ತಾರೆ. ದಾವಾ ಆಸ್ತಿಯನ್ನು 3 ಜನ ಸಹೋದರರು ಮೋಹನ್ ಕುಮಾರ್ ರವರಿಗೆ ಮಾರಾಟ ಮಾಡಿರುತ್ತಾರೆ ಎಂದರೆ ಸರಿಯಲ್ಲ. ಈ ಸಂಬಂಧ ಆಸ್ತಿಯನ್ನು ನೋಂದಣಿ ಮಾಡದಂತೆ ಕಡೂರು ಉಪ ನೋಂದಣಾಧಿಕಾರಿಗಳಿಗೆ ಅರ್ಜಿ ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. ದಾವಾ ಆಸ್ತಿಯನ್ನು ನಾನು ಮತ್ತು ಸಹೋದರರು ಸೇರಿ ವಾದಿಗೆ ಮಾರಾಟ ಮಾಡುತ್ತೇವೆ ಎಂದು ಹೇಳಿ ವಾದಿಗೆ ಕರಾರು ಪತ್ರ ಬರೆದುಕೊಟ್ಟಿರುತ್ತೇವೆ ಎಂದರೆ ಸರಿಯಲ್ಲ.

ನಿಮ್ಮ ವಿರುದ್ದ ಕ್ರಿಮಿನಲ್ ಪ್ರಕರಣವನ್ನು ಹೂಡಲು ನಿಮ್ಮ ಯಾವುದೇ ಅಭ್ಯಂತರ ಇಲ್ಲಾ. ಈ ಪ್ರಶ್ನೆ ಅಸಂಬದ್ಧ ಪ್ರಶ್ನೆಯಾದ ಕಾರಣ ನ್ಯಾಯಾಲಯ ದಾಖಲಿಸಲು ನಿರಾಕರಿಸಿರುತ್ತದೆ.

ವಾದಿಯ ಪರಿಚಯ ನನಗೆ ಇರುತ್ತದೆ ಎಂದರೆ ಸಾಕ್ಷಿ 30 ವರ್ಷಗಳಿಂದ ನನಗೂ ವಾದಿಗೂ ಮಾತುಕತೆ ಇಲ್ಲಾ ಎಂದು ನುಡಿಯುತ್ತಾರೆ. ವಾದಿ ಮತ್ತು ನನ್ನ ತಂದೆ ಚಿಕ್ಕಪ್ಪ ದೊಡ್ಡಪ್ಪನ ಮಕ್ಕಳು ಎಂದರೆ ಸರಿ. ದಾವಾ ಅಸ್ತಿಯ ಖಾತೆ ಮಾಡಿಕೊಡುವಂತೆ ನನ್ನ ಸಹೋದರರು ನನ್ನ ವಿರುದ್ದ ಆರ್ ಎ ಸಂಖ್ಯೆ 64ಃ2024 ರಂತೆ ಮಾನ್ಯ ಉಪ ವಿಭಾಗಾಧಿಕಾರಿಗಳ ನ್ಯಾಯಾಲಯದಲ್ಲಿ ಮೇಲ್ಮನವಿ ಸಲ್ಲಿಸಿರುತ್ತಾರೆ ಎಂದರೆ ಸರಿಯಲ್ಲ. ಮೋಹನ್ ಕುಮಾರ್ ರವರು ದಾವಾ ಆಸ್ತಿಯನ್ನು ಖರೀದಿಸಿ ಮಾನ್ಯ ಉಪ ವಿಭಾಗಾಧಿಕಾರಿಗಳ ನ್ಯಾಯಾಲಯದಲ್ಲಿ ಮೇಲ್ಮನವಿ ಸಲ್ಲಿಸಿರುತ್ತಾರೆ ಎಂದರೆ ಸರಿಯಲ್ಲ. ಕುಟುಂಬದ ಸಮಾರಂಭಗಳಲ್ಲಿ ನಾನು ದಾವಾ ಆಸ್ತಿಯನ್ನು ವಾದಿಗೆ ಬಿಟ್ಟುಕೊಡುತ್ತೇನೆ ಎಂದರೆ ಸರಿಯಲ್ಲ.

ದಾವಾ ಆಸ್ತಿಯಲ್ಲಿ ಈಗ ಬೆಳೆ ಬೆಳೆದಿರುತ್ತೀರಾ ಎಂಬ ಪ್ರಶ್ನೆಗೆ ಸಾಕ್ಷಿ ನಾನು ರಾಗಿ ಬೆಳೆದಿರುತ್ತೇನೆ. ಸಾಕ್ಷಿ ಮುಂದುವರೆದು ತೆಂಗಿನ ಗಿಡಗಳನ್ನು ಬೆಳೆಸಿರುತ್ತೇನೆ ಎಂದು ನುಡಿಯುತ್ತಾರೆ. ನಾನು ವಾದಿಯಿಂದ ಕ್ರಮವಾಗಿ ರೂ. 65,000 ಹಾಗೂ ರೂ. 1,25,000 ಹಾಗೂ ರೂ. 65,000 ಹಾಗೂ ವಾದಿಯ ಮಗಳಿಂದ ರೂ. 4,00,000 ಗಳನ್ನು ಪಡೆದಿರುತ್ತೇನೆ ಎಂದರೆ ಸರಿಯಲ್ಲ. ದಾವಾ ಆಸ್ತಿ ನನ್ನ ಸ್ವಯಾರ್ಜಿತ ಆಸ್ತಿ ಅಲ್ಲಾ ಎಂದರೆ ಸರಿ, ಪಿತ್ರಾರ್ಜಿತ ಆಸ್ತಿ ಎಂದರೆ ಸರಿ. ದಾವಾ ಆಸ್ತಿ ನನ್ನ ಮುತ್ತಾತನಿಂದ ನನ್ನ ತಂದೆಗೆ, ನನ್ನ ತಂದೆಯಿಂದ ನನಗೆ ಬಂತು ಎಂದರೆ ಸಾಲ ಮಾಡಿಸುವ ಸಲುವಾಗಿ 4 ಜನ ಸಹೋದರರ ಹೆಸರಿಗೆ ನಾನು

ಮಾಡಿಸಿರುತ್ತೇನೆ ಎಂದು ನುಡಿಯುತ್ತಾರೆ. ನಾನು ಬ್ಯಾಂಕಿನಿಂದ ಯಾವುದೇ ಸಾಲ ಪಡೆದಿಲ್ಲ ಎಂದರೆ ಸರಿ. ಸಾಕ್ಷಿ ಮುಂದುವರೆದು ಸಾಲ ಪಡೆಯಲು ಹೋಗಿದ್ದು ಜಂಟಿ ಖಾತೆಯಾದ ಕಾರಣ ಸಾಲ ನೀಡಿಲ್ಲ ಎಂದು ನುಡಿಯುತ್ತಾರೆ. ನಮ್ಮ ಕುಟುಂಬದಲ್ಲಿ ಜುಬಾನೆ ಪಾಲು ಪಾರಿಕತ್ತು ಆಗಿರುತ್ತದೆಯೇ ಹೊರತು ನೋಂದಣಿ ವಿಭಾಗಪತ್ರವಾಗಿಲ್ಲ ಎಂದರೆ ಸರಿ. ನನ್ನ ತಾತನ ಆಸ್ತಿ ಮತ್ತು ದಾವಾ ಆಸ್ತಿ ಒಂದೇ ಬೌಂಡರಿಯಲ್ಲಿರುತ್ತದೆ ಎಂದರೆ ಸರಿ. ಸಾಕ್ಷಿ ಮುಂದುವರೆದು ಮಧ್ಯೆ ಒಂದು ರಸ್ತೆ ಇರುತ್ತದೆ ಎಂದು ನುಡಿಯುತ್ತಾರೆ. ನಮ್ಮ ಕುಟುಂಬದಲ್ಲಿ ಯಾವುದೆ ಜುಬಾನೆ ಪಾಲುಪಾರಿಕತ್ತು ಆಗಿಲ್ಲ ಎಂದರೆ ಸರಿಯಲ್ಲ. ಯಾವುದೇ ಪಾಲುಪಾರಿಕತ್ತು ಆಗದೇ ಇದ್ದರೂ ಸಹ ಕಂದಾಯ ಇಲಾಖೆಯೊಂದಿಗೆ ಶರೀಖಾಗಿ ಸುಳ್ಳು ದಾಖಲೆ ಸೃಷ್ಟಿಸಿರುತ್ತೇನೆ ಎಂದರೆ ಸರಿಯಲ್ಲ. ದಾವಾ ಆಸ್ತಿಯು ನನ್ನ ತಾತನಾದ ಶಂಕ್ರಪ್ಪನ ಭಾಗಕ್ಕೆ ಬಂದ ಸ್ವತ್ತಾಗಿದ್ದು ಅದನ್ನು ವಾದಿಗೆ ಬಿಟ್ಟುಕೊಡುವುದಾಗಿ ಹೇಳಿ ನಿಪಿ-1 ರ ಕ್ರಯಪತ್ರವನ್ನು ಬರೆಸಿಕೊಂಡಿದ್ದೇನೆ ಎಂದರೆ ಸರಿಯಲ್ಲ. ಮೋಹನ್ ಕುಮಾರ್ ರವರು ಸುಳ್ಳು ಸಾಕ್ಷಿ ಹೇಳಿ ಎಂದು ನನ್ನನ್ನು ಕಳುಹಿಸಿರುತ್ತಾರೆ ಎಂದರೆ ಸರಿಯಲ್ಲ. ಮೋಹನ್ ಕುಮಾರ್ ರವರನ್ನು ಈ ದಾವೆಯಲ್ಲಿ ಪಕ್ಷಗಾರರನ್ನಾಗಿ ಮಾಡಲು ನನಗೆ ಯಾವುದೇ ತೊಂದರೆ ಇಲ್ಲಾ ಎಂದರೆ ಸಾಕ್ಷಿ ನೀವು ಮಾಡಿಕೊಳ್ಳಿ ಎಂದು ನುಡಿಯುತ್ತಾರೆ.

( ಮುಂದುವರೆದ ಪಾಟೀ ಸವಾಲಿಗಾಗಿ ಸಮಯಕೋರಿದ್ದರಿಂದ ಮುಂದೂಡಲಾಯಿತು )

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿದನ್ನು ಬೆರಳಚ್ಚುಗಾರರಿಗೆ ಉಕ್ತಲೇಖನ ನೀಡಿ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೇ ಸ ಇ

Sd/-
3 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರಃದಃನ್ಯಾಃದಂ.,ರವರು, ಕಡೂರು.